ಸಂ/ಕಂ/ಹ.ಬ/ನಾ.ಕ.ಕೊ./26/2014-15. ದಿನಾಂಕ:12-04-2016.

| ಅರ್ಜಿದಾರರು | ತಕರಾರುದಾರರು |
|---|---|
| ಮೂಡಿ ಬಸವರಾಜಪ್ಪ ತಂದೆ ಲೇಟ್ ಮೂಡಿ ಕೊಟ್ರಪ್ಪ<br>ಚಪ್ಪರದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಗಂಗಮ್ಮನಹಳ್ಳಿ ಕೊಟ್ರಬಸಪ್ಪ ತಂದೆ ಲೇಟ್ ಚನ್ನಬಸಪ್ಪ<br>2)ಚಿಕ್ಕವುಜ್ಜನಿ ಗೌಡ್ರು ಬಸಮ್ಮ ಗಂಡ ಲೇಟ್ ಸಿದ್ರಾಮಪ್ಪ<br>3)ಸಿದ್ದಪ್ಪ ತಂದೆ ಸಿದ್ರಾಮಪ್ಪ (ಪತ್ರೆಪ್ಪ)<br>ಚಪ್ಪರದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 99ಪೈಕಿ. ವಿಸ್ತೀರ್ಣ 1-55 ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 99ಪೈಕಿ. ವಿಸ್ತೀರ್ಣ 1-55 ಎಕ್ರೆ ಜಮೀನನ್ನು ಸದರಿ ಗ್ರಾಮದ ಮೂಡಿ ಬಸವರಾಜಪ್ಪ ತಂದೆ ಲೇಟ್ ಕೊಟ್ರಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚಪ್ಪರದಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 11-06-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಗಂಗಮ್ಮನಹಳ್ಳಿ ಕೊಟ್ರಬಸಪ್ಪ ತಂದೆ ಲೇಟ್ ಚನ್ನಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 28/2013-14. ದಿನಾಂಕ: 12-07-2014 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ: 19-08-2014 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಚಪ್ಪರದಹಳ್ಳಿ ಗ್ರಾಮದ ಸನಂ 99ಪೈಕಿ. ವಿಸ್ತೀರ್ಣ 1-55 ಎಕ್ರೆ ಜಮೀನು ಅರ್ಜಿದಾರರ ಅಜ್ಜನಾದ ಅಡಿವೆಪ್ಪನ ಮಗ ಮೂಡಿ ನಂದೆಪ್ಪ ಇವರು ದಿನಾಂಕ 26-01-1927 ರ ಡಾಕ್ಯುಮೆಂಟ್ ನಂಬರ್: 247/1927 ರ ಪ್ರಕಾರ ಇವರು ತನ್ನ ಖಾಸಾ ಮಗಳಾದ ಚಿಕ್ಕವುಜ್ಜನಿ ಗೌಡ್ರು ಸಿದ್ರಾಮಪ್ಪನ ಹೆಂಡತಿ ಬಸವ್ವಳಿಗೆ ತಮ್ಮ ಸ್ವ ಇಚ್ಛೇಯಿಂದ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ.

ತದಾನಂತರ ಸದರಿ ದಾನ ಪತ್ರ ಪ್ರಕಾರ ಎಂ.ಆರ್.ನಂಬರ್;18/2013-14. ದಿನಾಂಕ: 30-04-2014 ರಲ್ಲಿ ಚಿಕ್ಕವುಜ್ಜನಿ ಗೌಡ್ರು ಬಸವ್ವ ಗಂಡ ಸಿದ್ರಾಮಪ್ಪ ಇವರ ಹೆಸರಲ್ಲಿ ಹಕ್ಕು ಬದಲಾವಣೆಯಾಗಿರುತ್ತದೆ.

ಸದರಿ ಚಿಕ್ಕವುಜ್ಜನಿ ಗೌಡ್ರು ಬಸವ್ವ ಗಂಡ ಲೇಟ್ ಸಿದ್ರಾಮಪ್ಪ ಇವರು ದಿನಾಂಕ 19-02-1953 ರಂದು ಹಾಗೂ ಇವರ ಗಂಡನಾದ ಗೌಡ್ರು ಸಿದ್ರಾಮಪ್ಪ ಇವರು ದಿನಾಂಕ 13-06-1971 ರಂದು ಹಾಗೂ ಸದರಿ ಬಸವ್ವಳ ಒಬ್ಬಳೆ ಮಗಳಾದ ಕೊಟ್ರವ್ವ ಗಂಡ ಲೇಟ್ ಮೂಡಿ ಕೊಟ್ರಪ್ಪ ಇವರು ದಿನಾಂಕ 03-04-2004 ರಂದು ಮತ್ತು ಇವರ ಗಂಡನಾದ ಮೂಡಿ ಕೊಟ್ರಪ್ಪ ಇವರು ದಿನಾಂಕ 22-02-1960 ರಂದು ನಿಧನ ಹೊಂದಿರುತ್ತಾರೆ.

ಸದರಿ ಜಮೀನಿಗೆ ಪ್ರತಿವಾದಿಗಳು ವಾರಸುದಾರರಾಗಿರುವುದಿಲ್ಲ ಪ್ರತಿವಾದಿಯಾದ ಬಿಷ್ಣಹಳ್ಳಿ ಬಸಮ್ಮ ಗಂಡ ಪತ್ರೆಪ್ಪ ಇವರು ಚಿಕ್ಕವುಜ್ಜನಿ ಬಸಮ್ಮ ಗಂಡ ಲೇಟ್ ಸಿದ್ರಾಮಪ್ಪ ಎನ್ನುವವರು ಆಗಿರುವುದಿಲ್ಲ ಹಾಗೂ ಪ್ರತಿವಾದಿ 03 ಸಿದ್ದಪ್ಪ ತಂದೆ ಪತ್ರೆಪ್ಪ ಇವರು ಸಿದ್ದಪ್ಪ ತಂದೆ ಸಿದ್ರಾಮಪ್ಪ ಆಗಿರುವುದಿಲ್ಲ.

ಪ್ರತಿವಾದಿ ಬಸಮ್ಮ ಇವರು ವಂಶವೃಕ್ಷ ಸೃಷ್ಟಿ ಮಾಡಿ ದಿನಾಂಕ 06-01-2015 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಸದರಿ ಬಸಮ್ಮಳ ತಂದೆ ಮಲ್ಲನಗೌಡ್ರು ಕರಿಯಪ್ಪ ಮತ್ತು ಇವರ ತಾಯಿ ಮೂಗಮ್ಮ ಇವರು ಮೂಲತಹ ಹಾರಕಬಾವಿ ಗ್ರಾಮದ ವಾಸಿಗಳಾಗಿದ್ದು ಇವರಿಗೆ ಮೂರು ಗಂಡು ಮಕ್ಕಳು ಎರಡು ಮಕ್ಕಳಿರುತ್ತಾರೆ. ಸದರಿ ಬಸಮ್ಮಳನ್ನು ಬಿಷ್ಣಹಳ್ಳಿ ಪತ್ರೆಪ್ಪ ಇವರಿಗೆ ಮದುವೆ ಮಾಡಿ ಕೊಟ್ಟಿದ್ದು ಇವರು ತದ್ಧಾನಂತರ ಚಪ್ಪರದಹಳ್ಳಿ ಗ್ರಾಮಕ್ಕೆ ಬಂದಿರುತ್ತಾರೆ. ಸದರಿ ಪ್ರತಿವಾದಿ 03 ಸಿದ್ದಪ್ಪ ತಂದೆ ಪತ್ರೆಪ್ಪ ಎಂದು ಸಿದ್ರಾಮಪ್ಪ ಅಲ್ಲ ಎಂಬುದರ ಬಗ್ಗೆ ಚುನಾವಣಾ ಗುರುತಿನ ಚೀಟಿ ಹಾಗೂ ಸರ್ಕಾರಿ ದಾಖಲೆಗಳಲ್ಲಿ ನಮೂದಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಗಳು ಸಲ್ಲಿಸಿರುವ ತಕರಾರು ಅರ್ಜಿಯನ್ನು ತಳ್ಳಿಹಾಕಿ ಪೋತಿವಾರಸು ಹಕ್ಕಿನ ಪ್ರಕಾರ ವಾದಿಯ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಮೂಡಿ ಅಡಿವೆಪ್ಪ ತಂದೆ ನಂದೆಪ್ಪ ಇವರಿಂದ ಚಿಕ್ಕವುಜ್ಜನಿ (ಬಿಷ್ಣಹಳ್ಳಿ) ಲಿಂಗಪ್ಪನ ಮಗ ಸಿದ್ರಾಮಪ್ಪ ಇವರು ದಾನ ಪತ್ರವನ್ನು ದಿನಾಂಕ 09-01-1925 ರಲ್ಲಿ ಬರೆದು ಕೊಟ್ಟಿರುತ್ತಾರೆ.

ತದಾನಂತರ ಕಲ್ಲಜ್ಜಿ ಅಜ್ಜಪ್ಪನಿಂದ ಚಿಕ್ಕವುಜ್ಜನಿ (ಬಿಷ್ಣಹಳ್ಳಿ) ಪತ್ರೆಪ್ಪ ಜನ್ಮನಾಮ ಸಿದ್ರಾಮಪ್ಪನ ಹೆಂಡತಿ ಬಸಮ್ಮಳಿಗೆ ದಿನಾಂಕ 18-01-1984 ರಲ್ಲಿ ಕ್ರಯ ಪತ್ರ ಬರೆದು ಕೊಟ್ಟಿರುತ್ತಾರೆ.

ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಗಳಿಗೆ ಸಂಬಂದಿಸಿದ ಜಮೀನು ಆಗಿರುವ ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲ್ಕಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 99ಪೈಕಿ. ವಿಸ್ತೀರ್ಣ 1–55 ಎಕ್ರೆ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಉಭಯರು ಸೂಕ್ತ ನ್ಯಾಯಾಲಯದಲ್ಲಿ ಪರಿಹಾರ ಕಂಡು ಕೊಳ್ಳಲು ಸೂಚಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಮೂಡಿ ಬಸವರಾಜಪ್ಪ ತಂದೆ ಲೇಟ್ ಕೊಟ್ರಪ್ಪ ಚಪ್ಪರದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ಎಂ.ಮದನಕುಮಾರ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಗಂಗಮ್ಮನಹಳ್ಳಿ ಕೊಟ್ರಬಸಪ್ಪ ತಂದೆ ಲೇಟ್ ಚನ್ನಬಸಪ್ಪ. ಚಿಕ್ಕವುಜ್ಜನಿ ಗೌಡ್ರು ಬಸಮ್ಮ ಗಂಡ ಲೇಟ್ ಸಿದ್ರಾಮಪ್ಪ. ಸಿದ್ದಪ್ಪ ತಂದೆ ಲೇಟ್ ಸಿದ್ರಾಮಪ್ಪ (ಪತ್ರೆಪ್ಪ) ಚಪ್ಪರದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ
4) ಅಪೀಲು ಅವಧಿ 60 ದಿವಸ ಇರುತ್ತದೆ.